ನಾನು ಕೆಟ್ಟವನೇ ಇದ್ದಿರಬಹುದು. ಕೆಲವರ ದೃಷ್ಟಿಯಲ್ಲಿ ಲಂಚಕೋರ. ಕೆಲವರನ್ನುವಂತೆ ಅನಾಚಾರಿ, ಅವ್ಯವಹಾರಿ, ಅಹಂಕಾರಿ ಇತ್ಯಾದಿ ಗುಣವಾಚಕಗಳನ್ನು ಜನ ನನ್ನ ಹಿಂದೆ ಮುಂದೆ ಆಡಿಕೊಳ್ಳುತ್ತಿರಲೂಬಹುದು. ಯಾರ ಅಭಿಪ್ರಾಯ ಎಂತೇ ಇರಲಿ ನಾನೊಬ್ಬ ಉತ್ತಮ ಜಾತಿಯವ. ಮಿಗಿಲಾಗಿ ತಂದೆಯಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವವ. ತಂದೆಯ ಸ್ಥಾನ ಅದೆಷ್ಟು ಹೊಣೆಗಾರಿಕೆಯುಳ್ಳದ್ದು ಎಂಬುದು ಮಕ್ಕಳಿಗ್ವೇಗೆ ಅರ್ಥವಾಗಬೇಕು? ಮಕ್ಕಳೂ ನನ್ನನ್ನು ಅನ್ನುವವರೆ. ಇವನ್ನ ಸಾಕಿ, ಸಲಹಿ ವಿದ್ಯೆಕಲಿಸಿ ಅವಕ್ಕೊಂದು ಜೀವನವನ್ನು ರೂಪಿಸಿಕೊಡುವಲ್ಲಿ ಇಂಥ ದುಬಾರಿ ದಿನದಲ್ಲಿ ಮೇಲೆ ಹೇಳಿದ ಎಲ್ಲಾ ಬಿರುದುಗಳನ್ನೂ ಪಡೆದಿರಬಹುದು. ಆ ಬಗ್ಗೆ ಖಂಡಿತ ನಾನು ತಲೆಕೆಡಿಸಿಕೊಳ್ಳುತ್ತಿಲ್ಲ. ನನ್ನ ಹೆಣ್ಣುಮಕ್ಕಳಿಬ್ಬರ ಮದುವೆ ನಿರ್ವಿಘ್ನವಾಗಿ ಮುಗಿದುಬಿಟ್ಟರೆ ನಂತರ ಜನ ನನ್ನನ್ನು ಬೀದಿಯಲ್ಲಿ ನಿಲ್ಲಿಸಿ ಕಲ್ಲು ಹೊಡೆಯಲಿ. ಸರ್ಕಾರ ಬೇಕಾದಂತಹ ಶಿಕ್ಷೆ ನೀಡಲಿ ನನಗೆ ಅಂಜಿಕೆಯಿಲ್ಲ. ಈಗ ಇರುವ ಅಂಜಿಕೆಯೆಲ್ಲಾ ಈ ಮದುವೆಯು ಯಾವ ಅಡೆತಡೆಯೂ ಇಲ್ಲದೆ ನಡೆದೀತೆ ಎಂಬುದೇ. ಅವನು ಬರುವುದು ಹೇಗಾದರೂ ತಪ್ಪಿದರೆ ಸಾಕು–ಗೆದ್ದಂತೆ.

ಮದುವೆಗೆಂದೇ ಬ್ಯಾಂಕಿನಲ್ಲಿರಿಸಿದ ಹಣವನ್ನೆಲ್ಲಾ ತೆಗೆದಿದ್ದೇನೆ. ಅಳಿಯಂದಿರ ಮನಸ್ಸು ಚಿಕ್ಕದಾಗದಿರಲೆಂದು, ನನ್ನ ಹೆಣ್ಣುಮಕ್ಕಳ ಬಗ್ಗೆ ವರದಕ್ಷಿಣೆಯಲ್ಲಿ ಕೊಂಚ ಕೂಡ ತಕರಾರು ಮಾಡಿಲ್ಲ. ಆದರೆ ನನ್ನ ಹೆಣ್ಣುಮಕ್ಕಳಿಗೇ ನಾನೆಂದರೆ ಅಸಡ್ಡೆ. ಅವರಿಗಾಗಿ ನಾನೇನು ಮಾಡಲಿಲ್ಲ, ಮಾಡುತ್ತಿಲ್ಲ, ನನ್ನನ್ನು ಮಹಾಸ್ವಾರ್ಥಿ ಎಂದೇ ಹಂಗಿಸುತ್ತಾಳೆ ಮೊದಲನೆ ಮಗಳು ರಾಧ. ಎರಡನೆಯವಳಿಗಂತೂ ನನ್ನ ನೆರಳು ಕಂಡರೂ ಆಗದು.

'ಒಂದ್ನಿಮಿಷ ಬರಬೇಕಂತೆ ಚಿಕ್ಕಪ್ಪ'– ಅಣ್ಣನ ಮಗ ಬಂದು ಕರೆದಾಗ ಅಂಗಳದಲ್ಲಿ ಹಪಹಪಿಸುತ್ತ ಸುತ್ತಾಡುತ್ತಿದ್ದವನು ಒಳ ಹೋಗುತ್ತೇನೆ. ಪಡಸಾಲೆಯಲ್ಲೆಲ್ಲ ಹೆಂಗಸರು ಮಕ್ಕಳು ತುಂಬಿಬಿಟ್ಟಿದ್ದಾರೆ. ರುಕ್ಕಜ್ಜಿ ಎಂತದೋ 'ಜೋಕ್' ಹೊಡೆದು ವರಮಹಾಶಯರುಗಳನ್ನು ನಗಿಸುತ್ತಿದ್ದಾಳೆ. ನನ್ನ ಮಕ್ಕಳಂತೂ 'ಗಪ್' ಕೂತಿದ್ದಾರೆ. ರಾಧಳ ಮುಖದಲ್ಲಿ ಗೆಲುವಿದೆ. ಗೆಲುವಾಗಿ ಸರಬರ ಓಡಾಡುತ್ತಿದ್ದಾಳೆ. ಎರಡನೆಯವಳು ಮಾತ್ರ ಭೂತಬಡಿದಂತೆ ಕೂತಿದ್ದಾಳೆ. ಹಾಳಾದವಳು. ನನ್ನ ಮಾನ ತೆಗೆಯಲೆಂದೇ ಹುಟ್ಟಿಬಿಟ್ಟಿದ್ದಾಳೆ. ಮದುವೆಯೊಂದು ನಿರ್ವಿಘ್ನವಾಗಿ ಮುಗಿದು ಅವಳು ಗಂಡನ ಮನೆ ಸೇರಲಿ. ತೌರು ಅಂತ ಅತ್ತು ಕರೆದರೂ ಕರೆಸಿಕೊಳ್ಳೋದಿಲ್ಲ ಇವಳನ್ನ. 'ಏನೋ ಮಕ್ಕಳನ್ನೇ ನೋಡ್ತಾ ನಿಂತುಬಿಟ್ಟೆ... ಬಾರೋ ಇಲ್ಲಿ ಶಾಸ್ತ್ರಿಗಳು ಕರೀತಾ ಅವ್ರೆ'– ಅಣ್ಣ ಹಿಗ್ಗಿನಿಂದ ನಗೆನಗುತ್ತ ಹತ್ತಿರ ಕರೆಯುತ್ತಾನೆ. ಪಿಸುಗುಟ್ಟುತ್ತಾನೆ.

'ಆಯ್ತು ಯಾವುದಕ್ಕೂ ಸಂಕೋಚಬೇಡ... ಹಾಗೇ ಮಾಡಿ' ಅನ್ನುತ್ತೇನೆ.

'ಈವತ್ತಿನ ಅಡಿಗೆ ಹೋಪ್‌ಲೆಸ್. ಅದೂ ಮಧ್ಯರಾತ್ರೀಲಿ ಊಟ ಹಾಕಿಸಿದರೆ ಅರಗುತ್ತೇನ್ರಿ? ನಾಳೇನಾದ್ರೂ ಹೊತ್ತಿಗೆ ಸರಿಯಾಗಿ ಊಟ ತಿಂಡಿ ಹಾಕ್ಸ್‌ರೀ ಬೀಗರೆ'– ವರಮಹಾಶಯನ ಅಣ್ಣ ಎಲ್ಲರಿಗೂ ಕೇಳುವಂತೆ ದೊಡ್ಡ ಗಂಟಲು ಎತ್ತುತ್ತಾನೆ.

'ಚಿಂತೆ ಬ್ಯಾಡ ಮರಾಯ್ರೆ, ನಾಳೆ ನಂ ಕೃಷ್ಣಸ್ವಾಮಿ ಮೂರು ಸ್ವೀಟ್ ಮಾಡಿಸ್ತಾನೆ... ತ್ರಿಬಲ್ ಸ್ವೀಟ್ ಹಿಹ್ಹಿಹಿಹಿ...' ಅಣ್ಣ ನನ್ನ ಪರವಾಗಿ ಅಂದಾಗ ನಾನು ಅವರಿವರ ಮುಖನೋಡಿ ದೈನ್ಯದಿಂದ ನಗುತ್ತೇನೆ. ಹಾಳಾದವ ಅನ್ನ ಒಂದಿಷ್ಟು ಮಿಡ್ಡೆ ಮಾಡಿಬಿಟ್ಟ, ಭಟ್ಟ. ಅಷ್ಟಕ್ಕೇ ಇಷ್ಟು ಜನರೆದುರು ಮಾನ ತೆಗೆಯಲು ನಿಂತ ಗಂಡಿನ ಮನೆಯವರ 'ಅಹಂ'ನ ಬಗ್ಗೆ ರೇಗುತ್ತದೆ.